ಚುಕ್ಕೆ ಗುರುತಿಲ್ಲದ ಪ್ರಶ್ನೆ 27 : 79

ಸದಸ್ಯರ ಹೆಸರು : ಶ್ರೀ ಟಿ. ವಿ. ಜಯಚಂದ್ರ (ಶಿರಾ)

ಉತ್ತರಿಸುವ ಸಚಿವರು : ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು)

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಳೆದ 3 ವರ್ಷಗಳಿಂದ ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ, ಗುಬ್ಬಿ ತಾಲ್ಲೂಕುಗಳಲ್ಲಿ ಇದುವರೆಗೂ ನೀಡಿರುವ ಕಬ್ಬಿಣದ ಅದಿರು ಮತ್ತು ಮ್ಯಾಗ್ನೀಸ್ ಗಣಿಗುತ್ತಿಗೆಗಳು ಎಷ್ಟು;
(ವಿವರ ನೀಡುವುದು)</td><td>ಚಿಕ್ಕನಾಯಕನಹಳ್ಳಿ ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಕಳೆದ ಮೂರು ವರ್ಷಗಳಿಂದ 5 ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. (ಅನುಬಂಧ-1)</td></tr>
<tr><td>ಆ.</td><td>ಇವುಗಳಿಗೆ ಇದುವರೆಗೂ ನೀಡಿದ ಪರವಾನಗಿ (Permit) ಎಷ್ಟು; ಇದರಿಂದ ಸರ್ಕಾರಕ್ಕೆ ಸಂದಾಯವಾಗಿರುವ ಆದಾಯ ಎಷ್ಟು;</td><td>ಸದರಿ ಗಣಿಗುತ್ತಿಗೆಗಳಿಗೆ ಇದುವರೆಗೂ ನೀಡಿರುವ ಪರವಾನಿಗೆಗಳು ಹಾಗೂ ಸಂದಾಯವಾಗಿರುವ ಆದಾಯದ ವಿವರ ಈ ಕೆಳಕಂಡಂತೆ ಇರುತ್ತದೆ.
<table>
<tr><th>ಕ್ರ ಸಂ.</th><th>ವರ್ಷ</th><th>ಪರವಾನಿಗೆ ನೀಡಿರುವ ಖನಿಜ ಪ್ರಮಾಣ (ಮೆಟ್ರಿಕ್ ಟನ್ ಗಳಲ್ಲಿ)</th><th>ಸಂದಾಯವಾಗಿರುವ ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>2005-06</td><td>104251</td><td>162326.00</td></tr>
<tr><td>2</td><td>2006-07</td><td>124705</td><td>1751781.00</td></tr>
<tr><td>3</td><td>2007-08</td><td>101747</td><td>1582330.00</td></tr>
<tr><td></td><td>ಒಟ್ಟು</td><td>330703</td><td>3496437.00</td></tr>
</table></td></tr>
<tr><td>ಇ.</td><td>ಅನಧಿಕೃತವಾಗಿ ನಡೆಯುತ್ತಿರುವ ಗಣಿಗಾರಿಕೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
</table>

ಈ.	ಹಾಗಿದ್ದಲ್ಲಿ, ಅಂತಹ ಕಂಪೆನಿಗಳು / ವ್ಯಕ್ತಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)	ಅಕ್ರಮ ಗಣಿಗಾರಿಕೆಯನ್ನು ನಿಯಂತ್ರಿಸಲು, ತಡೆಗಟ್ಟಲು ರಾಜ್ಯ ಮಟ್ಟದಲ್ಲಿ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಹಾಗೂ ಜಿಲ್ಲಾಮಟ್ಟದ ಟಾಸ್ಕ್‌ಫೋರ್ಸ್ ಸಮಿತಿಯನ್ನು ದಿನಾಂಕ : 16-11-2005ರ ಸರ್ಕಾರದ ಆದೇಶ ಸಂಖ್ಯೆ : ಸಿಐ. 194:ಎಂಎಂಎಂ. 2005ರಲ್ಲಿ ರಚಿಸಲಾಗಿರುತ್ತದೆ. ಸದರಿ ಸಮಿತಿಯಲ್ಲಿ ಅರಣ್ಯ, ಕಂದಾಯ, ಸಾರಿಗೆ, ಪೊಲೀಸ್, ವಾಯು ನಿಯಂತ್ರಣಮಂಡಳಿ, ಐ.ಬಿ.ಎಂ., ಮೈನ್ಸ್ ಇಲಾಖೆಯ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ. ಇತ್ತೀಚೆಗೆ National Remote Sensing Agency ಮೂಲಕ Quickbird Satellite Imagery dateವನ್ನು ಬಳ್ಳಾರಿ ಜಿಲ್ಲೆಯ 8219-00 ಚ.ಕಿ.ಮೀ. ವ್ಯಪ್ತಿಯ ಪರಿವೀಕ್ಷಣೆಗಾಗಿ ಒಳಪಡಿಸುವಂತಹ ವ್ಯವಸ್ಥೆಯನ್ನು ಸಹ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಜೊತೆಗೆ, ಕೆಲವು ಆಯ್ದ ಜಿಲ್ಲೆಗಳಲ್ಲಿ ಪರವಾನಗಿಗಳ ದುರುಪಯೋಗವನ್ನು ತಡೆಯುವ ದೃಷ್ಟಿಯಿಂದ ಗಣಕೀಕರಣವನ್ನೂ ಸಹ ಮಾಡಲಾಗಿರುತ್ತದೆ. ಈ ನಿಟ್ಟಿನಲ್ಲಿ, ಅತ್ಯಾಧುನಿಕ ಚೆಕ್‌ಪೋಸ್ಟ್, ತನಿಖಾ ಠಾಣೆಗಳನ್ನು ಪ್ರಮುಖ ಸ್ಥಳಗಳಲ್ಲಿ, ಪ್ರದೇಶಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಅಕ್ರಮ ಗಣಿಗಾರಿಕೆ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ಲೋಕಾಯುಕ್ತರನ್ನು ಕೋರಲಾಗಿದೆ. ಈ ರೀತಿ ರಾಜ್ಯದಲ್ಲಿ ಅನಧಿಕೃತ ಗಣಿಗಾರಿಯೆನ್ನು ತಡೆಗಟ್ಟಲು, ನಿಯಂತ್ರಿಸಲು ಎಲ್ಲಾ ರೀತಿಯ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಕಳೆದ 3ವರ್ಷಗಳಲ್ಲಿ 1190 ವಾಹನಗಳನ್ನು ತಪಾಸಣೆ ಮಾಡಿ 63.32ಲಕ್ಷ ರೂ.ಗಳ ದಂಡ ವಸೂಲಿ ಮಾಡಲಾಗಿದೆ. ಅನಧಿಕೃತವಾಗಿ ಗಣಿಗಾರಿಕೆ ನಡೆಸಿ ದಾಸ್ತಾನಿಸಿದ ಸುಮಾರು 87,887 ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ವಶಪಡಿಸಿಕೊಡಂಉ, ಈಗಾಗಲೇ 32,205 ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಬಹಿರಂಗ ಹರಾಜು ಮೂಲಕ ವಿಲೇಮಾಡಿ, ರೂ.1,53,71,300/-ಗಳನ್ನು ಸರ್ಕಾರಕ್ಕೆ ಜಮಾ ಮಾಡಲಾಗಿದೆ.